ಯಾರಿಗೆ ಯಾರು ಹೊಣೆ? ಅದೆಲ್ಲ ಸುಳ್ಳು. ಪ್ರತಿಯೊಬ್ಬನ ಜೀವನಕ್ಕೂ ಅವನ ಆಯ್ಕೆ ನಿರ್ಧಾರಗಳಿಗೂ, ಅವುಗಳ ಪರಿಣಾಮಗಳಿಗೂ ಬಹುಮಟ್ಟಿಗೆ ಅವನೇ ಹೊಣೆಗಾರ. ಆದರೂ ಈ ಯುವಕ ಚಂದ್ರನ ಸಾವಿಗೆ ನಾನೂ ಕೊಂಚ ಮಟ್ಟಿಗೆ ಹೊಣೆಗಾರನಾದೆನೇನೋ ಎಂಬ ಭಾವನೆ ನನ್ನಲ್ಲಿ ಉಳಿದುಬಿಟ್ಟಿದೆ. ಈ ಕಥೆ ಓದಿದ ನಂತರ ನಿಮಗೂ ಹಾಗೇ ಅನ್ನಿಸಿದರೆ, ದಯವಿಟ್ಟು ನನ್ನನ್ನು ಕ್ಷಮಿಸಿ.

★★★

ಅಂದು ಸಂಜೆ ಸ್ಟೇಟ್ ಬ್ಯಾಂಕಿನ ಪ್ರಧಾನ ಕಚೇರಿಯ ಸಭಾಂಗಣದಲ್ಲಿ ಬ್ಯಾಂಕಿನ ಸಿಬ್ಬಂದಿ ವರ್ಗದವರಿಗಾಗಿ, ಅಲ್ಲಿನ 'ಕನ್ನಡಸಂಘ'ದಿಂದ ಒಂದು ಕವನಸ್ಪರ್ಧೆ ಏರ್ಪಾಟಾಗಿತ್ತು. ನನ್ನನ್ನು ಕಾರ್ಯಕ್ರಮದ ಅಧ್ಯಕ್ಷ ಮತ್ತು ತೀರ್ಪುಗಾರನನ್ನಾಗಿ ಆಹ್ವಾನಿಸಿದ್ದರು. ಹೋಗಿದ್ದೆ.

ನಗರದ ವಿವಿಧ ಬ್ಯಾಂಕುಗಳಿಂದ ಸುಮಾರು ಇಪ್ಪತ್ತು ಯುವಕರು, ಮೂವರು ಯುವತಿಯರು ಸ್ಪರ್ಧೆಯಲ್ಲಿ ಭಾಗವಹಿಸಿ ತಮ್ಮ ಕವಿತೆಗಳನ್ನು ವಾಚಿಸಿದರು. ಕವನಗಳು ತಕ್ಕ ಮಟ್ಟಿಗಿದ್ದವು. ಬಹುಪಾಲು ಪ್ರೇಮ, ಪ್ರಕೃತಿ, ಖಾಸಗಿ, ತೀಟೆ, ತುರಿಕೆ ಇತ್ಯಾದಿಗಳ ಬಗ್ಗೆ ಅಪ್ರಬುದ್ಧ ಹೇಳಿಕೆಗಳ ಸಡಿಲ ಪದ್ಯಗಳಾಗಿದ್ದವು. ಕೆಲವು 'ಬಂಡಾಯ' ಕವನಗಳೂ ಇದ್ದವು. ಅವುಗಳಲ್ಲಿ ಕೇವಲ ಭಾವಾವೇಶ, ಘೋಷಣೆ, ದೂಷಣೆ, ಖಂಡನೆಗಳೇ ತುಂಬಿದ್ದವು. ಒಂದು ಕವಿತೆ ಮಾತ್ರ ನನ್ನನ್ನು ಆಳವಾಗಿ ಕಲಕಿ ಹೃದಯ ತಟ್ಟಿತು. ಅದೂ ಸಹ 'ಬಂಡಾಯ' ಧೋರಣೆಯದೇ. ಅಲ್ಲೂ ಕೊಂಚ ಭಾವತೀವ್ರತೆ ಇತ್ತು. ಆದರೂ ಅದರಲ್ಲಿ ನಿಜವಾದ ಕಾವ್ಯಸ್ಪರ್ಶವಿತ್ತು. ಹೊಚ್ಚ ಹೊಸ ರೂಪಕ, ಪ್ರತಿಮೆಗಳಿದ್ದವು. ವಸ್ತುವಿಗೆ ತಕ್ಕ ಲಯ, ಮಾತಿನಲ್ಲಿ ಸಂಕ್ಷಿಪ್ತತೆ, ಧ್ವನಿಸೂಕ್ಷ್ಮತೆಗಳಿದ್ದವು. ಆದ್ದರಿಂದ ಕವಿಯ ಕಳಕಳಿ ನಿಜವೆನ್ನಿಸಿ, ಕವನ ಹೃದಯಸ್ಪರ್ಶಿಯಾಗಿತ್ತು. ಆ ಕವನಕ್ಕೆ ಪ್ರಥಮ ಬಹುಮಾನ ಕೊಟ್ಟೆ. ನನ್ನ 'ಅಧ್ಯಕ್ಷ ಭಾಷಣ'ದಲ್ಲೂ ಆ ಕವನವನ್ನು ಮೆಚ್ಚಿ, ಮಾತಾಡಿದೆ.

ಆ ಯುವಕ ನನ್ನಿಂದ ಬಹುಮಾನ ಸ್ವೀಕರಿಸಲು ವೇದಿಕೆಗೆ ಬಂದಾಗ, ಮತ್ತೊಮ್ಮೆ ಅವನನ್ನು ಸೂಕ್ಷ್ಮವಾಗಿ ಗಮನಿಸಿದೆ. ವಯಸ್ಸು ಸುಮಾರು ಇಪ್ಪತ್ತೈದಿದ್ದೀತು. ನಸುಗಪ್ಪುಬಣ್ಣವಾದರೂ ಆಕರ್ಷಕ ಗಡುಸು ಮುಖ. ಅಲೆಗೂದಲು, ಪ್ರಖರ ಚೂಪುಗಣ್ಣು, ಸಾಧಾರಣ ಎತ್ತರ, ಬಲಿಷ್ಠ ಮೈಕಟ್ಟು, ಉಕ್ಕುವ ಯೌವನ ಉತ್ಸಾಹ. ಯಾರ ಗಮನವನ್ನಾದರೂ ತಟ್ಟನೆ ಸೆಳೆದು ನಿಲ್ಲಿಸಬಲ್ಲ ವಿಶಿಷ್ಟ ವ್ಯಕ್ತಿತ್ವ ಆ ಯುವಕನಲ್ಲಿತ್ತು.

ಅವನನ್ನು ಸಭೆಗೆ ಪರಿಚಯಿಸುತ್ತಾ ಸಂಘದ ಕಾರ್ಯದರ್ಶಿ ಹೇಳಿದ, 'ನಮ್ಮ ಬ್ಯಾಂಕಿನ ಸಿಬ್ಬಂದಿ ವರ್ಗದವರೇ ಆದ ಶ್ರೀ ಚಂದ್ರಕಾಂತರೆಡ್ಡಿಯವರು ಇಂದಿನ 'ಕವನಸ್ಪರ್ಧೆ'ಯಲ್ಲಿ ಪ್ರಥಮ ಬಹುಮಾನ ಗಳಿಸಿರುವುದು ನಮಗೆಲ್ಲ ಸಂತೋಷದ ಹೆಮ್ಮೆಯ ವಿಷಯ. ಇವರನ್ನು ನಾವೆಲ್ಲ ಪ್ರೀತಿಯಿಂದ 'ಚಂದ್ರ' ಎಂದು ಕರೆಯುತ್ತೇವೆ. ಆದರೆ ಇವರು ಸ್ವಯಂ ಪ್ರತಿಭೆಯಿಂದ ಉರಿಯುವ ಸೂರ್ಯನಂತಹ ಪ್ರಖರ ವ್ಯಕ್ತಿತ್ವ ಉಳ್ಳವರು. ಇಲ್ಲಿ ಆಶ್ಚರ್ಯದ ಗಮನಾರ್ಹ ಸಂಗತಿ ಎಂದರೆ ಶ್ರೀ ಚಂದ್ರ ಮೂಲತಃ ಆಂಧ್ರದವರು. ಇವರ ಮನೆ ಮಾತು ತೆಲುಗು. ಇವರು ತೆಲುಗು ಮತ್ತು ಇಂಗ್ಲಿಷ್ ಸಾಹಿತ್ಯದಲ್ಲಿ ಪದವೀಧರರು. ಇವರು ಬೆಂಗಳೂರಿಗೆ ಬಂದು ಕೇವಲ ನಾಲ್ಕು ವರ್ಷಗಳಾಗಿವೆ. ಇಷ್ಟರಲ್ಲೇ ಕನ್ನಡ ಎಷ್ಟು ಚೆನ್ನಾಗಿ ಕಲಿತಿದ್ದಾರೆಂಬುದಕ್ಕೆ ಇಂದು ಇವರು ಗಳಿಸಿರುವ ಬಹುಮಾನವೇ ಸ್ಪಷ್ಟ ಸಾಕ್ಷಿ.'

'ಶ್ರೀಚಂದ್ರ ಶ್ರೀಮಂತ ಜಮೀನ್ದಾರ ಕುಟುಂಬದವರು. ಕೂತು ಉಂಡರೂ ಕರಗಷ್ಟು ಸಂಪತ್ತು